# ‘ರಿಪ್ಪನ್ ಸ್ವಾಮಿ’ಯಲ್ಲಿ ರಗಡ್ ವಿಜಯ್

ಭಿನ್ನ ಪಾತ್ರಗಳನ್ನು ಆದ್ಯತೆಯಾಗಿಟ್ಟುಕೊಂಡಿರುವ ನಟ ವಿಜಯ್ ರಾಘವೇಂದ್ರ, ಇದೀಗ ‘ರಿಪ್ಪನ್ ಸ್ವಾಮಿ’ಯಾಗಿ ತೆರೆಗೆ ಬರಲು ಸಜ್ಜಾಗಿದ್ದಾರೆ. ‘ಮಾಲ್ಗುಡಿ ಡೇಸ್’, ‘ರಾಘು’, ‘ಕೇಸ್ ಆಫ್ ಕೊಂಡಾಣ’ ಈಚಿನ ಈ ಸಿನಿಮಾಗಳಲ್ಲಿ ವಿಭಿನ್ನ ಗೆಟಪ್‌ನೊಂದಿಗೆ ಪ್ರೇಕ್ಷಕನೆದುರಿಗೆ ಕಾಣಿಸಿಕೊಂಡಿದ್ದರು. ಇದೀಗ ‘ರಿಪ್ಪನ್ ಸ್ವಾಮಿ’ಯಾಗಿ ತೆರೆ ಮೇಲೆ ಬರುತ್ತಿದ್ದಾರೆ.

ಪಂಚಾನನ ಫಿಲಂಸ್ ನಿರ್ಮಾಣದ ಈ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದ್ದು, ಕುತೂಹಲ ಹುಟ್ಟಿಸುವಂತಿದೆ. ಈ ಹಿಂದೆ ವಿಜಯ ರಾಘವೇಂದ್ರ ನಟಿಸಿದ್ದ ‘ಮಾಲ್ಗುಡಿ ಡೇಸ್’ ಸಿನಿಮಾ ಮಾಡಿದ್ದ ಕಿಶೋರ್ ಮೂಡುಬಿದ್ರೆ ಅವರೇ ‘ರಿಪ್ಪನ್ ಸ್ವಾಮಿ’ಗೂ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ತಾರಾಗಣದಲ್ಲಿ ಅಶ್ವಿನಿ ಚಂದ್ರಶೇಖರ್, ಪ್ರಕಾಶ್ ತುಮ್ಮಿನಾಡು, ವಜ್ರಧೀರ್ ಜೈನ್, ಯಮುನಾ ಶ್ರೀನಿಧಿ, ಮೋಹನ್ ಶೇಣಿ, ಕೃಷ್ಣಮೂರ್ತಿ ಕವತ್ತಾರ್ ಮುಂತಾದವರು ಇದ್ದಾರೆ. ಸಿನಿಮಾದ ಚಿತ್ರೀಕರಣ ಪೂರ್ಣಗೊಂಡಿದ್ದು, ಕೊಪ್ಪ, ಕಳಸ, ಬಾಳೆಹೊನ್ನೂರು ಸುತ್ತಮುತ್ತ ಶೂಟಿಂಗ್ ನಡೆಸಲಾಗಿದೆ.

‘ಚಿತ್ರದ ಶೀರ್ಷಿಕೆ ಒಂದು ಪಾತ್ರದ ಹೆಸರು. ಸಣ್ಣಕೊಪ್ಪ ಎಂಬ ಕಾಲ್ಪನಿಕ ಊರಿನಲ್ಲಿ ನಡೆಯುವ ಕಥೆ ಇದಾಗಿದೆ. ಮಲೆನಾಡು ಭಾಗದಲ್ಲಿರುವ ಈ ಊರಿನಲ್ಲಿರುವ ಎಸ್ಟೇಟ್‌ನಲ್ಲಿ ಕಥೆ ನಡೆಯುತ್ತದೆ. ಆ ಊರಿನಲ್ಲಿ ನಡೆಯುವ ನಿಗೂಢ ಘಟನೆಗಳ ಸುತ್ತ ಚಿತ್ರಕಥೆ ಇದೆ. ಇದೊಂದು ಥ್ರಿಲ್ಲರ್ ಮಿಸ್ಟರಿ ಸಿನಿಮಾ. ಹಾಸ್ಯದ ಲೇಪನವೂ ಇದೆ. ಇದು ವಿಜಯ ರಾಘವೇಂದ್ರ ಅವರಿಗಾಗಿಯೇ ನಾನು ಬರೆದ ಸಿನಿಮಾ. ಅವರನ್ನು ಬೇರೆ ಶೇಡ್‌ನಲ್ಲಿ ತೋರಿಸುವ ಕೆಲಸ ಇದರಲ್ಲಾಗಿದೆ. ಇಲ್ಲಿಯವರೆಗೂ ಈ ಶೇಡ್‌ನಲ್ಲಿ ಅವರನ್ನು ಪ್ರೇಕ್ಷಕರು ನೋಡಿಲ್ಲ. ಸಿನಿಮಾದ ಶೂಟಿಂಗ್ ಪೂರ್ಣಗೊಂಡಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಆರಂಭವಾಗಿವೆ. ಜೂನ್ ಅಥವಾ ಜುಲೈನಲ್ಲಿ ಸಿನಿಮಾ ತೆರೆಕಾಣಲಿದೆ’ ಎಂದಿದ್ದಾರೆ ಕಿಶೋರ್.





# ‘ಕರಾವಳಿ’ಗೆ ಪ್ರಜ್ವಲ್ ತಾಲೀಮು

‘ಕರಾವಳಿ’ ಸಿನಿಮಾ ಪೋಸ್ಟರ್ ಈಚೆಗೆ ರಿಲೀಸ್ ಆಗಿದ್ದು, ನಟ ಪ್ರಜ್ವಲ್ ದೇವರಾಜ್ ಯಕ್ಷಗಾನ ವೇಷದಲ್ಲಿರುವ ಪೋಸ್ಟರ್ ಗಮನಸೆಳೆಯುವಂತಿದೆ. ತಮ್ಮ ಲುಕ್ ಬಗ್ಗೆ, ಸಿನಿಮಾ ತಯಾರಿ ಬಗ್ಗೆ ಪ್ರಜ್ವಲ್ ಮಾತನಾಡಿದ್ದಾರೆ.

‘ಈ ಹೊಸ ವೇಷದಲ್ಲಿ ನನ್ನನ್ನು ಕಂಡುಹಿಡಿಯುವುದು ನನಗೇ ಕಷ್ಟವಾಯಿತು. ಈ ವೇಷದಲ್ಲಿ ಕಾಣಿಸಿಕೊಳ್ಳುವುದು ದೊಡ್ಡ ಜವಾಬ್ದಾರಿಯಾಗಿತ್ತು. ಆ ಕಿರೀಟವೇ ನಾಲ್ಕು ಕೆ.ಜಿ. ತೂಗುತ್ತಿತ್ತು. ಯಕ್ಷಗಾನ ಹಾಗೂ ಕಂಬಳ ನನಗೆ ಮೊದಲ ಹಾಗೂ ಹೊಸ ಅನುಭವ. ಸೂಕ್ತ ಲುಕ್‌ಗಾಗಿ ಯಕ್ಷಗಾನ ಮೇಕಪ್ ಕಲಾವಿದರನ್ನು ಕರೆಸಿದ್ದೆವು. ಪ್ರತಿ ಸ್ಟ್ರೋಕ್, ಪ್ರತಿ ಕಲರ್, ಪ್ರತಿ ಗೆರೆ ಕೂಡ ಅತಿ ಅಚ್ಚುಕಟ್ಟಾಗಿ ಮಾಡಲಾಗಿದೆ. ಒಂದು ತಪ್ಪು ಗೆರೆ ಬೇರೆಯದೇ ಭಾವವನ್ನು ತಂದುಬಿಡಬಹುದು. ಬಣ್ಣ ಹಾಗೂ ಸ್ಟ್ರೋಕ್‌ನ ಸರಿಯಾದ ಕಾಂಬಿನೇಷನ್, ಸರಿಯಾದ ಭಾವವನ್ನು ಹೊರಹೊಮ್ಮಿಸಬಲ್ಲದು. ಈ ಎಚ್ಚರಿಕೆಗಳನ್ನಿಟ್ಟುಕೊಂಡೇ ಸಿದ್ಧವಾದೆವು’ ಎಂದು ಹೇಳಿದ್ದಾರೆ.

‘ವಾಸ್ತವಕ್ಕೆ ಹತ್ತಿರವಾದ ಪಾತ್ರವನ್ನು ನಿರ್ವಹಿಸಬೇಕಾದರೆ, ಅದಕ್ಕೆ ತಕ್ಕಂತೆ ಸಾಕಷ್ಟು ಸಿದ್ಧತೆಯೂ ಇರಬೇಕಾಗುತ್ತದೆ. ನೀವು ಒಂದು ಸಂಸ್ಕೃತಿಯನ್ನು ಪ್ರತಿನಿಧಿಸುತ್ತಿದ್ದರೆ, ಅದರಲ್ಲಿ ಪಳಗಿರಬೇಕಾಗುತ್ತದೆ ಅಥವಾ ಸರಿಯಾದ ಕಲಿಕೆ ಅಗತ್ಯವಿರುತ್ತದೆ. ನಾನು ಭಾಷೆ, ಉಚ್ಚಾರಣೆ, ಬಾಡಿ ಲಾಂಗ್ವೇಜ್, ಮ್ಯಾನರಿಸಂ, ಪ್ರತಿಯೊಂದು ಸಂಗತಿಯನ್ನೂ ಅಭ್ಯಾಸ ಮಾಡಿದ್ದೇನೆ. ನನ್ನ ಪಾತ್ರಕ್ಕೆ ನ್ಯಾಯ ದೊರಕಿಸಿಕೊಡುವ ಎಲ್ಲಾ ಅಂಶಗಳಲ್ಲಿಯೂ ತರಬೇತಿ ಪಡೆದುಕೊಂಡಿದ್ದೇನೆ’ ಎಂದು ವಿವರಿಸಿದ್ದಾರೆ. ಭಾಷಾ ತಜ್ಞರ ಸಹಾಯದೊಂದಿಗೆ ಡೈಲಾಗ್‌ಗಳನ್ನು ಅಭ್ಯಾಸ ಮಾಡಿದ್ದಾರೆ ಪ್ರಜ್ವಲ್.